OS No. 99/2016 DW-1

<u>ದಿನಾಂಕ 25.01.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಮತಿ ವಿ.ಜೆ. ವಕೀಲರಿಂದಃ</u>

ನಾನು ಬಿಎ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ. ವಾದ ಪತ್ರವನ್ನು ತಿಳಿದುಕೊಂಡಿದ್ದೇನೆ ಸಾಕ್ಷ್ಯ ಪ್ರಮಾಣ ಪತ್ರದ ವಿಷಯ ಗೊತ್ತಿದೆ. ವಾದಿ ನನ್ನ ಮಾವ. ಪ್ರತಿವಾದಿ 7 ರವರಿಗೆ ವಾದಿ ಅಣ್ಣ ಆಗಬೇಕು. ವಾದಿ ಮತ್ತು ಪ್ರತಿವಾದಿ ನಡುವೆ ವಿಭಾಗ ಪತ್ರ ಆಗಿಲ್ಲ ವಾದಿ ಮತ್ತು ಪ್ರತಿವಾದಿ ನಡುವೆ ವಿಭಾಗದ ಬಗ್ಗೆ 2016 ರಲ್ಲಿ ಮಾತುಕತೆ ಆಗಿದೆ. ಸೆಪ್ಟೆಂಬರ್ ಕೊನೆಯ ವಾರ 2016 ರಲ್ಲಿ ವಿಭಾಗದ ಬಗ್ಗೆ ಮಾತುಕತೆ ಆಗಿತ್ತು ಎಂದರೆ ನಿಜ. ಗಲಾಟೆ ಆಗಿದ್ದರಿಂದ ಈ ವಿಭಾಗದ ಮಾತುಕತೆ ಫಲಪ್ರದ ಆಗಿಲ್ಲ. ವಾದಿ ಭಾಗ ಕೇಳಿದಾಗ ನಾವು ನಿರಾಕರಿಸಿದ್ದೇವೆ ಎಂದರೆ ಸಾಕ್ಷಿಯು ಅವರವರಿಗೆ ಗಲಾಟೆ ಆಯಿತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಬೆಳೆಗಳನ್ನು ನಾವು ಪಡೆದುಕೊಳ್ಳುತ್ತಿದ್ದೇವೆ. ವಾದಿ ಮತ್ತು ನಾವು ಒಟ್ಟು ಕುಟುಂಬದಲ್ಲಿ ವಾಸ ಇದ್ದೇವೆ ಎಂದರೆ ನಿಜ. ಕೋಡಂಬಳ್ಳಿಯ ಕೆಂಪಯ್ಯ ಅಲಿಯಾಸ್ ಗುಡ್ಡೆ ಕೆಂಪಯ್ಯ ರವರ ಮನೆಯಲ್ಲಿ ವಾದಿ ಮತ್ತು ನಾವು ವಾಸ ಇದ್ದೇವೆ ಎಂದರೆ ನಿಜ.

ಪ್ರತಿವಾದಿ 4 ರವರು ಬೆಂಗಳೂರಿನಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ನಿಜ. ಈ ಮನೆ ಕಟ್ಟಲು ಕೆಂಪಯ್ಯ ಅಲಿಯಾಸ್ ಗುಡ್ಡೆ ಕೆಂಪಯ್ಯ ರವರು ಹಣ ನೀಡಿದ್ದರು ಎಂ ದರೆ ನಿಜ. 1 ರಿಂದ 7 ನೇ ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳು ಎಂದರೆ ನಿಜ. ವಾದಿಗೆ ದಾವಾ ಸ್ವತ್ತುಗಳಲ್ಲಿ ಪಾಲಿನ ಹಕ್ಕು ಇದೆ ಎಂದರೆ ನಿಜ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)** *

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.